# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | :: | 185 |
| ಸದಸ್ಯರ ಹೆಸರು | :: | ಶ್ರೀ ರಘುನಾಥರಾವ್ ಮಾಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | :: | 11-07-2018 |
| ಉತ್ತರಿಸುವ ಸಚಿವರು | :: | ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸ್ಮಶಾನ ಭೂಮಿ ಇಲ್ಲದ ಕಡೆಗಳಲ್ಲಿ ಭೂಮಿಯನ್ನು ಖರೀದಿಸಲು ಹಣ ಕಾಯ್ದಿರಿಸಿದ್ದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು) | ಹೌದು.<br><br>2015-16ನೇ ಮತ್ತು 2016-17ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಮಶಾನ ಭೂಮಿ ಖರೀದಿ ಹಾಗೂ ಸ್ಮಶಾನದ ಸ್ಥಳದಲ್ಲಿ ಇನ್ನಿತರೆ ಸೌಲಭ್ಯಗಳನ್ನು ಒದಗಿಸಲು ಬೀದರ್ ಜಿಲ್ಲೆಗೆ ಪರಿಶಿಷ್ಟ ಜಾತಿಯ ಜನಾಂಗದವರಿಗಾಗಿ ರೂ. 100.00 ಲಕ್ಷಗಳನ್ನು ದಿನಾಂಕ: 05.04.2016ರ ಆದೇಶದಂತೆ ಹಾಗೂ ಪರಿಶಿಷ್ಟ ಪಂಗಡದವರಿಗೆ ರೂ.25.00 ಲಕ್ಷಗಳನ್ನು ದಿನಾಂಕ: 18.03.2017ರ ಆದೇಶದಂತೆ ಹಂಚಿಕೆ ಮಾಡಿ ಸಮಾಜ ಕಲ್ಯಾಣ ಇಲಾಖೆಯಿಂದ ಆದೇಶ ಹೊರಡಿಸಿ, ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರ ಜಂಟಿ ಖಾತೆಗೆ ಬಿಡುಗಡೆ ಮಾಡಿರುತ್ತಾರೆ. |
| ಆ) | ಹಾಗಿದ್ದಲ್ಲಿ, ಹಣವನ್ನು ಕಾಯ್ದಿರಿಸಿ ಎಷ್ಟು ಕಾಲವಾಗಿದೆ ಮತ್ತು ಇದುವರೆವಿಗೂ ಎಷ್ಟು ಕಡೆ ಭೂಮಿಯನ್ನು ಖರೀದಿಸಲಾಗಿದೆ; ಹಾಗೆ ಖರೀದಿಸಿದಲ್ಲಿ ಭೂಮಿಗೆ ತಗುಲಿದ ವೆಚ್ಚ ಎಷ್ಟು; (ಮಾಹಿತಿ ನೀಡುವುದು). | ಪ್ರಸ್ತಾಪಿತ ಉದ್ದೇಶಕ್ಕಾಗಿ ಹಣವನ್ನು ಕಾಯ್ದಿರಿಸಿ ಸುಮಾರು 2 ವರ್ಷಗಳಾಗಿರುತ್ತದೆ. ಸದರಿ ಅನುದಾನದಲ್ಲಿ ಸ್ಮಶಾನ ಭೂಮಿ ಖರೀದಿಸಿರುವುದಿಲ್ಲ. |
| ಇ) | ಭೂಮಿಯನ್ನು ಯಾವ ವರ್ಷದಲ್ಲಿ, ಯಾವ ಯಾವ ಗ್ರಾಮಗಳಲ್ಲಿ ಎಷ್ಟು ಮೊತ್ತಕ್ಕೆ ಎಷ್ಟು ಎಕರೆ ಖರೀದಿಸಲಾಗಿದೆ: ಖರೀದಿಸಿದ್ದಲ್ಲಿ, ತಗುಲಿದ ವೆಚ್ಚ ಮತ್ತು ಯಾವ ವರ್ಷದಲ್ಲಿ ಎಂಬುದರ ಕುರಿತು ಗ್ರಾಮವಾರು ಸಂಪೂರ್ಣ ಮಾಹಿತಿ ಒದಗಿಸುವುದು? | ಉದ್ಭವಿಸುವುದಿಲ್ಲ. |

ಸಂಖ್ಯೆ: ಆರ್‌ಡಿ 9 ಎಲ್‌ಜಿಐ 2018

ಆರ್.ವಿ. ದೇಶಪಾಂಡೆ
ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು